779(1332) ಶ್ರೀ ನಿರ್ಮಲ್ ಸುರಾನ (ಭಾರತೀನಗರ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪೂಜಾ ಕೇಂದ್ರಗಳೆಷ್ಟು; ಅವುಗಳಿಂದ ಉತ್ಪತ್ತಿಯಾಗುವ ವಾರ್ಷಿಕ ಆದಾಯ, ಮುಜರಾಯಿ ದೇವಾಲಯ, ಮಸೀದಿ ಹಾಗೂ ಚರ್ಚುಗಳು ಇತ್ಯಾದಿ(ತಾಲ್ಲೂಕುವಾರು ವಿವರ ನೀಡುವುದು)

ಆ) ಮುಜರಾಯಿ ದೇವಾಲಯಗಳಲ್ಲಿನ ಆದಾಯವನ್ನು ಅಲ್ಪಸಂಖ್ಯಾತೆ ಧಾರ್ಮಿಕ ಚಟುವಟಿಕೆಗೆ ಬಳಸಿರುವ ಔಚಿತ್ಯವೇನು (ದೇವಾಲಯಗಳಿಗಿಂತ ಬಹುಪಟ್ಟು);

ಇ) ಅವ್ಯಾಹತವಾಗಿ ನಡೆದು ಬಂದಿರುವ ಈ ತಾರತಮ್ಯ ಮತ್ತು ಬಹುಸಂಖ್ಯಾತರ ಧಾರ್ಮಿಕ ಭಾವನೆಯ ಅಪಮಾನಕ್ಕೆ ಸರ್ಕಾರ ತಡೆಹಾಕುವುದೇ ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ದಿ : 1/05/2003 ರಿಂದ ಜಾರಿಗೆ ಬಂದಿರುವ ಇಲಾಖೆಯ 'ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ 1997' ರ ಪ್ರಕಾರ ಈ ಇಲಾಖೆಯ ಆಡಳಿತ ವ್ಯಾಪ್ತಿಗೆ 34,211 ಅಧಿಸೂಚಿತ ಸಂಸ್ಥೆಗಳು ಒಳಪಡುತ್ತವೆ. ಹಿಂದೂ ಧಾರ್ಮಿಕ ಸಂಸ್ಥೆಗಳಲ್ಲದೆ ಮಸೀದಿ, ಚರ್ಚುಗಳು ಮುಜರಾಯಿ ಇಲಾಖೆಯ ಆಡಳಿತ ವ್ಯಾಪ್ತಿಗೆ ಬರುವುದಿಲ್ಲ. ತಾಲ್ಲೂಕುವಾರು ಅಧಿಸೂಚಿತ ಸಂಸ್ಥೆಗಳ ವಿವರ ಅನುಬಂದ–1 ರಲ್ಲಿ ಲಗತ್ತಿಸಿದೆ.

ಈ ದೇವಾಲಯಗಳಿಂದ ಸರ್ಕಾರಕ್ಕೆ ಯಾವುದೇ ಆದಾಯ ಬರುವುದಿಲ್ಲ.

ಆ) ಮುಜರಾಯಿ ದೇವಾಲಯಗಳಲ್ಲಿನ ಆದಾಯವನ್ನು ದೇವಾಲಯದ ನಿರ್ವಹಣೆಗೆ, ಸಿಬ್ಬಂದಿ ವೆಚ್ಚಕ್ಕೆ ಸಂಬಂಧಿಸಿದ ದೇವಾಲಯದ ಅಭಿವೃದ್ಧಿ ಕಾಮಗಾರಿಗೆ ಬಳಸಲಾಗುತ್ತಿದೆ ಹೊರತು ಅಲ್ಪಸಂಖ್ಯಾತ, ಧಾರ್ಮಿಕ ಮತ್ತು ಇತರೇ ಚಟುವಟಿಕೆಗೆ ಬಳಸಿರುವುದಿಲ್ಲ.

ಇ) ಮೇಲ್ಕಂಡ ಉತ್ತರದ ಹಿನ್ನೆಲೆಯಲ್ಲಿ ಯಾವುದೇ ತಾರತಮ್ಯ ನಡೆದು ಬಂದಿರುವುದಿಲ್ಲ. ಆದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ದಿನಾಂಕ: 1-5-2003 ರಿಂದ ಜಾರಿಗೆ ಬಂದ ಏಕರೂಪ ಶಾಸನದ ಪ್ರಕಾರ ರಾಜ್ಯದಲ್ಲಿ ಈ ಇಲಾಖೆಯ ಆಡಳಿತ ವ್ಯಾಪ್ತಿಗೆ ಬರುವ ಅಧಿಸೂಚಿತ ಸಂಸ್ಥೆಗಳ ತಾಲ್ಲೂಕುವಾರು ಸಂಖ್ಯೆ ವಿವರ.

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು ಹೆಸರು	ಅಧಿಸೂಚಿತ ಸಂಸ್ಥೆಗಳ ಸಂಖ್ಯೆ	ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತು ಪಡಿಸಲಾದ ಸಂಸ್ಥೆಗಳ ಸಂಖ್ಯೆ	ಜಿಲ್ಲಾವಾರು ಸಂಸ್ಥೆಗಳ ಸಂಖ್ಯೆ
1	2	3	4	5	6
1	**ಬೆಂಗಳೂರು ನಗರ**	1) ಬೆಂಗಳೂರು ನಗರಸಭಾ ವಲಯ	68		
		2) ಬೆಂಗಳೂರು ಉತ್ತರ	152		
		3) ಬೆಂಗಳೂರು ಉತ್ತರ	167		

1	2	3	4	5	6
		ಅಪರ			
		4) ಬೆಂಗಳೂರು ದಕ್ಷಿಣ	193		
		5) ಬೆಂಗಳೂರು ಪೂರ್ವ	145		
		6) ಆನೇಕಲ್	291		1016
2	ಬೆಂಗಳೂರು ಗ್ರಾಮಾಂತರ	1) ಮಾಗಡಿ	268		
		2) ದೊಡ್ಡಬಳ್ಳಾಪುರ	270		
		3) ದೇವನಹಳ್ಳಿ	234		
		4) ಚನ್ನಪಟ್ಟಣ	160		
		5) ರಾಮನಗರ	167		
		6) ಕನಕಪುರ	270		
		7) ಹೊಸಕೋಟೆ	287		
		8) ನೆಲಮಂಗಲ	285		1941
3	ಬಾಗಲಕೋಟೆ	1) ಬಾಗಲಕೋಟೆ	191		
		2) ಬಾದಾಮಿ	171		
		3) ಬೀಳಗಿ	112		
		4) ಜಮಖಂಡಿ	344		
		5) ಮುಧೋಳ್	164		
		6) ಹುನಗುಂದ	185		1167
4	ಬೆಳಗಾವಿ	1) ಖಾನಾಪುರ	485		
		2) ಹುಕ್ಕೇರಿ	426		
		3) ಸವದತ್ತಿ	393		
		4) ಅಥಣಿ	296		
		5) ರಾಮದುರ್ಗ	262		
		6) ರಾಯಭಾಗ	203		
		7) ಬೆಳಗಾವಿ	531		
		8) ಗೋಕಾಕ್	368		
		9) ಬೈಲಹೊಂಗಲ	362		
		10) ಚಿಕ್ಕೋಡಿ	477		3803
5	ಬಳ್ಳಾರಿ	1) ಸಿರಗುಪ್ಪ	211		
		2) ಹೊಸಪೇಟೆ	204		
		3) ಕೂಡ್ಲಿಗಿ	204		
		4) ಹಗರಿ ಬೊಮ್ಮನಹಳ್ಳಿ	133		

1	2	3	4	5	6
		5) ಹೂವಿನ ಹಗಡಲಿ	92		
		6) ಸಂಡೂರು	83		
		7) ಬಳ್ಳಾರಿ	367		1294
6	ಬೀದರ್	1) ಬೀದರ್	35		
		2) ಔರದ್	18		
		3) ಹುಮ್ನಾಬಾದ್	102		
		4) ಬಸವಕಲ್ಯಾಣ	90		
		5) ಭಾಲ್ಕಿ	288		533
7	ಬಿಜಾಪುರ	1) ಬಸವನ ಬಾಗೇವಾಡಿ	118		
		2) ಬಿಜಾಪುರ	201		
		3) ಇಂಡಿ	47		
		4) ಮುದ್ದೇಬಿಹಾಳ್	151		
		5) ಸಿಂಧಗಿ	35		552
8	ಚಾಮರಾಜನಗರ	1) ಚಾಮರಾಜನಗರ	172		
		2) ಯಳಂದೂರು	62		
		3) ಕೊಳ್ಳೇಗಾಲ	141		
		4) ಗುಂಡ್ಲುಪೇಟೆ	39		414
9	ಚಿಕ್ಕಮಗಳೂರು	1) ಚಿಕ್ಕಮಗಳೂರು	432		
		2) ಮೂಡಿಗೆರೆ	71		
		3) ಕೊಪ್ಪ	136		
		4) ಶೃಂಗೇರಿ	91		
		5) ನರಸಿಂಹರಾಜಪುರ	25		
		6) ಕಡೂರು	48		
		7) ತರೀಕೆರೆ	66		869
10	ಚಿತ್ರದುರ್ಗ	1) ಚಿತ್ರದುರ್ಗ	98		
		2) ಚಳ್ಳಕೆರೆ	38		
		3) ಹಿರಿಯೂರು	37		
		4) ಹೊಸದುರ್ಗ	72		
		5) ಹೊಳಲ್ಕೆರೆ	37		
		6) ಮೊಳಕಾಲ್ಮೂರು	23		305
11	ದಾವಣಗೆರೆ	1) ಹರಪನಹಳ್ಳಿ	61		
		2) ಹರಿಹರ	47		
		3) ಹೊನ್ನಾಳಿ	215		

1	2	3	4	5	6
		4) ಚನ್ನಗಿರಿ	163		
		5) ಜಗಳೂರು	59		
		6) ದಾವಣಗೆರೆ	67		612
12	ದಕ್ಷಿಣ ಕನ್ನಡ	1) ಮಂಗಳೂರು	196		
		2) ಬಂಟ್ವಾಳ	84		
		3) ಬೆಳ್ತಂಗಡಿ	68		
		4) ಪುತ್ತೂರು	81		
		5) ಸುಳ್ಯ	52		481
13	ಧಾರವಾಡ	1) ಧಾರವಾಡ	240		
		2) ಹುಬ್ಬಳ್ಳಿ	278		
		3) ಕಲಘಟಗಿ	121		
		4) ನವಲಗುಂದ	161		
		5) ಕುಂದಗೋಳ	138		938
14	ಗದಗ್	1) ಗದಗ್	370		
		2) ರೋಣಾ	385		
		3) ಮುಂಡರಗಿ	81		
		4) ನರಗುಂದ	225		
		5) ಶಿರಹಟ್ಟಿ	321		1382
15	ಗುಲ್ಬರ್ಗಾ	1) ಗುಲ್ಬರ್ಗಾ	312		
		2) ಆಳಂದ	314		
		3) ಯಾದಗಿರಿ	222		
		4) ಸೇಡಂ	94		
		5) ಜೀವರ್ಗಿ	182		
		6) ಸುರಪುರ	680		
		7) ಚಿತ್ತಾಪುರ	280		
		8) ಅಫಜಲ್‌ಪುರ	334		
		9) ಚಿಂಚೋಳಿ	113		
		10) ಷಹಪುರ	307		2838
16	ಹಾಸನ	1) ಅರಕಲಗೂಡು	270		
		2) ಆಲೂರು	117		
		3) ಹೊಳೆ ನರಸೀಪುರ	219		

1	2	3	4	5	6
		4) ಅರಸೀಕೆರೆ	341		
		5) ಸಕಲೇಶಪುರ	28		
		6) ಚನ್ನರಾಯಪಟ್ಟಣ	548		
		7) ಬೇಲೂರು	370		
		8) ಹಾಸನ	550		2443
17	ಹಾವೇರಿ	1) ಹಾವೇರಿ	271		
		2) ಶಿಗ್ಗಾಂವ್	224		
		3) ಸವಣೂರು	20		
		4) ಬ್ಯಾಡಗಿ	134		
		5) ರಾಣೆಬೆನ್ನೂರು	178		
		6) ಹಾನಗಲ್	250		
		7) ಹೀರೆಕೆರೂರು	211		1288
18	ಕೊಡಗು	1) ಮಡಿಕೇರಿ	7		
		2) ವಿರಾಜಪೇಟೆ			
		3) ಸೋಮವಾರಪೇಟೆ			7
19	ಕೋಲಾರ	1) ಬಾಗೇಪಲ್ಲಿ	102		
		2) ಶ್ರೀನಿವಾಸಪುರ	239		
		3) ಗುಡಿಬಂಡೆ	154		
		4) ಮಾಲೂರು	183		
		5) ಮುಳಬಾಗಿಲು	273		
		6) ಗೌರಿಬಿದನೂರು	125		
		7) ಕೋಲಾರ	344		
		8) ಚಿಕ್ಕಬಳ್ಳಾಪುರ	200		
		9) ಬಂಗಾರಪೇಟೆ	281		
		10) ಶಿಡ್ಲಘಟ್ಟ	206		
		11) ಚಿಂತಾಮಣಿ	282		2389
20	ಕೊಪ್ಪಳ	1) ಗಂಗಾವತಿ	116		
		2) ಕೊಪ್ಪಳ	188		
		3) ಕುಷ್ಟಗಿ	222		
		4) ಯಲ್ಬುರ್ಗ	210		736
21	ಮಂಡ್ಯ	1) ಮಂಡ್ಯ	278		
		2) ಶ್ರೀರಂಗಪಟ್ಟಣ	139		

1	2	3	4	5	6
		3) ಕೆ.ಆರ್.ಪೇಟೆ	334		
		4) ಮದ್ದೂರು	280		
		5) ಮಳವಳ್ಳಿ	257		
		6) ಪಾಂಡವಪುರ	200		
		7) ನಾಗಮಂಗಲ	520		2008
22	**ಮೈಸೂರು**	1) ಮೈಸೂರು	333		
		2) ಕೆ.ಆರ್.ನಗರ	197		
		3) ಹುಣಸೂರು	121		
		4) ಹೆಚ್.ಡಿ.ಕೋಟೆ	157		
		5) ಪಿರಿಯಾಪಟ್ಟಣ	169		
		6) ಟಿ.ನರಸೀಪುರ	165		
		7) ನಂಜನಗೂಡು	147		1289
23	**ರಾಯಚೂರು**	1) ರಾಯಚೂರು	115		
		2) ದೇವದುರ್ಗ	348		
		3) ಮಾನ್ವಿ	67		
		4) ಲಿಂಗಸುಗೂರು	365		
		5) ಸಿಂಧನೂರು	392		1287
24	**ಶಿವಮೊಗ್ಗ**	1) ಶಿವಮೊಗ್ಗ	97		
		2) ಭದ್ರಾವತಿ	92		
		3) ತೀರ್ಥಹಳ್ಳಿ	179		
		4) ಸಾಗರ	48		
		5) ಸೊರಬ	95		
		6) ಶಿಕಾರಿಪುರ	39		
		7) ಹೊಸನಗರ	93		643
25	**ತುಮಕೂರು**	1) ತುಮಕೂರು	360		
		2) ಮಧುಗಿರಿ	38		
		3) ಗುಬ್ಬಿ	381		
		4) ಕೊರಟಗೆರೆ	138		
		5) ತುರುವೇಕೆರೆ	415		
		6) ತಿಪಟೂರು	284		
		7) ಸಿರಾ	82		
		8) ಚಿಕ್ಕನಾಯಕನಹಳ್ಳಿ	22ಗ		

1	2	3	4	5	6
		9) ಪಾವಗಡ	88		
		10) ಕುಣಿಗಲ್	453		2462
26	ಉಡುಪಿ	1) ಉಡುಪಿ	476		
		2) ಕುಂದಾಪುರ	252	1	
		3) ಕಾರ್ಕಳ	84		811
27	ಉತ್ತರ ಕನ್ನಡ	1) ಅಂಕೋಲ	38	6	
		2) ಕಾರವಾರ	55	4	
		3) ಯಲ್ಲಾಪುರ	75	7	
		4) ಕುಮಟ	118	11	
		5) ಜೋಯಿಡಾ	66	1	
		6) ಸಿದ್ದಾಪುರ	54	3	
		7) ಸಿರಸಿ	67	3	
		8) ಭಟ್ಕಳ	69	10	
		9) ಹೊನ್ನಾವರ	122	18	
		10) ಹಳಿಯಾಳ	83	3	
		11) ಮುಂಡಗೋಡು	22	–	703
		ಒಟ್ಟು	**34278**	**67**	**34211**

780(328) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ(ಬ್ಯಾಡಗಿ) : ಮಾನ್ಯ ಕಂದಾಯ ಸಚಿವರು ವಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬರಗಾಲ ಪರಿಹಾರ ಕಾಮಗಾರಿಗಳಲ್ಲಿ ಕೆರೆ ಹೂಳೆತ್ತುವ ಕಾಮಗಾರಿಗಳನ್ನು ಮಾತ್ರ ತೆಗೆದುಕೊಳ್ಳಲು ಸೂಚಿಸಿರುವುದು ಸರಿಯೇ :

ಆ) ಇದಕ್ಕೆ ಕಾರಣವೇನು?

ಇ) ಬರಗಾಲ ಪರಿಹಾರ ಕಾಮಗಾರಿಗಳಲ್ಲಿ ಗ್ರಾಮೀಣ ಸಂಪರ್ಕ ರಸ್ತೆ ಹಾಗೂ ಗ್ರಾಮ ನೈರ್ಮಲ್ಯ ಕಾಮಗಾರಿಗಳನ್ನು ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಬರಪರಿಹಾರ ಕಾಮಗಾರಿಗಳನ್ನು ಸಣ್ಣ ನೀರಾವರಿ ಮತ್ತು ಜಿಲ್ಲಾ ಪಂಚಾಯತ್ ಕೆರೆಗಳ ಹೂಳೆತ್ತಿ ಮತ್ತು ಪುನಃಶ್ಚೇತನ ಜಲಸಂರಕ್ಷಣೆ ಮತ್ತು ನೀರು ಸಂಗ್ರಹಣೆ ಕಾಮಗಾರಿಗಳಾದ ನಾಲಾ ಬಂದ್, ಜಲರಕ್ಷಣಾ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲು ಸೂಚನೆಗಳಿರುತ್ತದೆ.

ಆ) 'ಅ' ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಇ) 'ಅ' ಉತ್ತರದಲ್ಲಿದ್ದಂತೆ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶವಿಲ್ಲದಿದ್ದಲ್ಲಿ ಮಾತ್ರ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಸಿ.ಆರ್.ಎಫ್. ಸಮಿತಿಯ ಒಪ್ಪಿಗೆ ಪಡೆದು ತೆಗೆದುಕೊಳ್ಳಲು ಅವಕಾಶವಿರುತ್ತದೆ. ಗ್ರಾಮ ನೈರ್ಮಲ್ಯ ಕಾಮಗಾರಿಗಳನ್ನು ತೆಗೆದುಕೊಳ್ಳಲು ಬರಪರಿಹಾರ ಮಾರ್ಗಸೂಚಿಗಳನ್ವಯ ಅವಕಾಶಗಳಿರುವುದಿಲ್ಲ.